ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 03 ಸಿಡಿಟಿಪಿ 2012–13 / 340

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು–560 001.
ದಿನಾಂಕ: 11–05–2017.

–:ಸುತ್ತೋಲೆ:–

ವಿಷಯ:– Imparting Training on Digital financial transactions to the rural mass under CDTP scheme.

ಉಲ್ಲೇಖ:–
1. ಎಂಹೆಚ್ಆರ್‌ಡಿ, ಭಾರತ ಸರ್ಕಾರ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: 21–13/2016–ಟಿ.ಎಸ್ IV, ದಿನಾಂಕ: 22–2–2017.
2. ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಇವರ ಟಿಪ್ಪಣಿ ಸಂಖ್ಯೆ: ಪಿಎಸ್ ಸಿಎಂ/442/2017, ದಿನಾಂಕ: 08–3–2017.
3. ಕರ್ನಾಟಕ ಸರ್ಕಾರದ ಸಚಿವಾಲಯದ ಪತ್ರ ಸಂಖ್ಯೆ: ಇಡಿ 001 ಟಿಪಿಇ 2017, ದಿನಾಂಕ: 28–04–2017.

*****

ಮೇಲೆ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಸಚಿವರಾದ ಮಾನ್ಯ ಶ್ರೀ ಪ್ರಕಾಶ ಜಾವಡೇಕರ್ ಇವರು ಗ್ರಾಮಾಂತರ ಪ್ರದೇಶದ ಎಸ್.ಸಿ/ಎಸ್.ಟಿ, ಮಹಿಳೆಯರು, ಶಾಲೆಯಿಂದ ವಿಮುಖರಾದವರು, ಗ್ರಾಮಾಂತರ ವಾಸಿಗಳಿಗೆ ಪಾಲಿಟೆಕ್ನಿಕ್‌ಗಳ ಸಿಡಿಟಿಪಿ ಯೋಜನೆಯ ಮುಖಾಂತರ Digital Financial Transactions ಬಗ್ಗೆ ಅರಿವು ಮೂಡಿಸಲು ಮತ್ತು ಗ್ರಾಮೀಣ ಭಾಗದ ಜನರು ಲಭ್ಯವಿರುವ ವ್ಯವಸ್ಥೆಯನ್ನು ಬಳಸಿಕೊಳ್ಳಲು ಉತ್ತೇಜಿಸುವಂತೆ ತಿಳಿಸಿ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಿಗೆ ಅರೆಸರ್ಕಾರಿ ಪತ್ರ ಮುಖೇನ ಕೋರಿರುತ್ತಾರೆ. ಮುಂದುವರೆದು, ಪ್ರಸ್ತುತ ಮೊಬೈಲ್ ಬಳಕೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ವೆಸಾಮಾನ್ಯವಾಗಿರುವ ಹಿನ್ನೆಲೆಯಲ್ಲಿ Digital Financial Transactions ಉತ್ತಮವಾಗಿ ಜಾರಿಮಾಡಬಹುದೆಂದು ಸಹ ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ.

ಆದಕಾರಣ ಸಿಡಿಟಿಪಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಪಾಲಿಟೆಕ್ನಿಕ್‌ಗಳು Digital Financial Transactions ಎಂಬುದರ ಬಗ್ಗೆ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕ್/ಗ್ರಾಮೀಣ ಬ್ಯಾಂಕ್/ಸಹಕಾರಿ ಬ್ಯಾಂಕ್ ಇವರುಗಳ ಸಹಯೋಗದೊಂದಿಗೆ ಅರಿವು ಮೂಡಿಸಲು ಮತ್ತು ಉತ್ತಮವಾಗಿ ಬಳಸುವ ಬಗೆಯನ್ನು ತಿಳಿಸಲು ಪ್ರಾತ್ಯಕ್ಷತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ. ನಿಮ್ಮ ಸಂಸ್ಥೆಗಳಿಂದ Digital Financial Transactions ಬಗ್ಗೆ ನಡೆಸಿದ ಕಾರ್ಯಕ್ರಮಗಳ ಬಗ್ಗೆ ಭಾವ ಚಿತ್ರದೊಂದಿಗೆ ವರದಿಯನ್ನು ಎನ್‌ಐಟಿಟಿಟಿಆರ್ ಚೆನ್ನೈ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ರವಾನಿಸುವಂತೆ ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ:

1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.